# UNIVERSITY OF AGRICULTURAL SCIENCES, DHARWAD

# KRISHI VIGYAN KENDRA

SAIDAPUR FARM, DHARWAD -580 005

Newsletter

Issue 31, October-December, 2014 Ph : 0836-2444272 e-mail : pc_kvkd@rediffmail.com website : www.kvkdharwad.org


## National level Training Programme on "Protected Cultivation"




The Indian Council of Agricultural Research, New Delhi sponsored winter school on "Protected Cultivation" was organized from 4 to 24, December 2014 at Directorate of Extension, University of Agricultural Sciences, Dharwad under the leadership of Dr. S. M. Mantur, Programme Co-ordinator, Dharwad in co-ordination with Hi-Tech Horticulture Unit. Shri Bharat Lal Meena, Principal Secretary (Agriculture), Govt. of Karnataka inaugurated the winter school on December 5, 2014 and expressed that the hunger for knowledge is a great challenge for scientists and teachers and it should not end once they are employed. The process of learning is continuous in life and it should not end as knowledge has no boundaries and bounds. During this occasion Dr. D. P. Biradar, Hon'ble Vice Chancellor, UAS, Dharwad appreciated the vision and efforts made by Shri Bharat Lal Meena for uplifting the economic status of farming community and making agriculture more remunerative through Krishi Bhagya programme of Govt. of Karnataka.

During the valedictory function of the winter school on December 24, 2014 Dr. D. L. Maheswar, Hon'ble Vice-Chancellor, University of Horticultural Sciences, Bagalkot released the compendium of lecture notes of the winter school and emphasized the importance of technological revolutions in the field of agriculture and horticulture such as micro irrigation and protected cultivation. Dr. D. P. Biradar, Hon'ble Vice-Chancellor, UAS, Dharwad presiding over the valedictory function called upon participants to take the knowledge gained during the training to practice so that it reaches the farming community. Dr. M. B. Chetti, Director of Extension welcomed the gathering and introduced the Chief guests. Dr. S. M. Mantur, Course Director gave a brief account of winter school. Twenty six scientists from different states participated in the training.






## Swachh Bharat Abhiyan





October 2, 2014, the auspicious occasion of birth anniversary of Rashtrapita Mahatma Gandhiji, Swachh Bharat Abhiyan activities were organized at KVK premises. Dr. M. B. Chetti, Director of Extension, UAS, Dharwad inaugurated the Swachh Bharat Abhiyan programme by administering the cleanliness oath to staff of KVK. During this occasion, technical, non-technical and field staff actively participated in cleanliness work in and around the office and hostel premises.

## Joint Monitoring and Evaluation Team visit





The Joint Monitoring and Evaluation Team involving Shri. Ramamurthy, ZPD office, Bengaluru, Dr. M. B. Chetti, Director of Extension, UAS, Dharwad and Dr. P. S. Hugar reviewed the progress of activities of the centre on September 18, 2014. The members of the team visited the cotton frontline demonstration plots and discussed with farmers.



## Demonstration on use of composting cultures for crop residue management under Swachh Bharat Abhiyan





KVK, Saidapur Farm, Dharwad in collaboration with Gram Panchayat, Oilseeds Growers Association, Milk Producers Co-Operative Society and M/s. Mahalakshmi Agro Clinic of Hireharkuni, organized Swachh Bharat Abhiyan and demonstration on use of composting cultures for crop residue management at the premises of Nehru Yuva Kendra, Hireharkuni village of Kundagol taluk on October 2, 2014. Dr. S. M. Mantur, Programme Co-ordinator inaugurated the Swachh Bharat Abhiyan programme by administering the cleanliness oath to the Gram Panchayat officials and farmers. Dr. S. M. Hiremath and Dr. K. P. Gundannavar organized method demonstration on use of composting cultures for crop residue management in the backyard of Shri Shivayya Kallimath. More than 50 farmers participated and visualized the demonstration.

## Women in Agriculture Day



Women in Agriculture Day was celebrated at Karadigudda village Tq. Dharwad on December 4, 2014 and Dr. Uma N. Kulkarni, SMS (Home Science), highlighted the role of women in agriculture and importance of women in agriculture day celebration. Dr. S. M. Hiremath, SMS (Horticulture) narrated the agriculture based activities such as vermicomposting, production of planting material, fruit and vegetable cultivation, kitchen gardening to the farm women. Shri. Basavaraj Hittalamani, KCRS, UAS, Dharwad compeered the programme. Around 30 farm women participated in the programme.

## Participation in Krishi Mela





Dr. S. M. Hiremath participated in the Krishi Mela organized by the University of Agricultural and Horticultural Sciences, Shivamogga from October 18-20, 2014, Dr. S. M. Mantur and Shri. Kumar C. J. participated in the Krishi Mela organized by the University of Agricultural Sciences, Bengaluru from November 19-21, 2014 and showcased the farmer's friendly sustainable technologies.

## Rashtriya Krishi Vikas Yojane sponsored extension activities



### Workshop on Terrace Gardening



Krishi Vigyan Kendra, Saidapur farm in collaboration with the Directorate of Extension, UAS, Dharwad organized Training cum Workshop on Terrace Gardening for the urban dwellers of Dharwad district on December 26, 2014 at KVK, Dharwad. Dr. B. N. Vishwanath, President of Garden City Farmers Forum, Bengaluru and Consultant, Organic Terrace Gardening, Dr. Rajendra Hegde, Project Officer, Vittal Malya Scientific Research Foundation, Bangalore and Dr. S. M. Mantur, Programme Co-ordinator, KVK, Dharwad along with the scientists inaugurated the workshop by watering the plant. Dr. D. P. Biradar, Hon'ble Vice-Chancellor, UAS, Dharwad and Chief Guest of the function stressed the necessity of terrace gardening in relation to increasing population and decreasing cultivable land and distributed rose plant and local variety seeds of different vegetables. During this workshop, lectures on terrace gardening along with demonstration was organized followed by interaction with scientists. Dr. S. M. Mantur, President of the function advised the participants to take the benefit of the training and adopt the terrace gardening in their households.

Dr. S. K. Gali, Dr. S. S. Patil, Dr. S. V. Giddnavar, Scientists of UAS, Dharwad; Office bearers of Institution of Agricultural Technologists, Dharwad; Dr. Prakash Bhat, SCOPE NGO, Shri Y. H. Ryagi, Sinchana Nursery and Shri Vijay Hesarur, Tulasi Agro Services, Dr. N. B. Gadugimath, Director, R & D SARPAN Agri-Horticultural Research Centre, Dharwad and Shri M. G. Mayaganna, successful terrace gardener were present during the occasion. More than 125 participants from Dharwad district participated in the programme.



# Animal Health Camp

Krishi Vigyan Kendra, Saidapur farm in collaboration with different institutes of Hireharkuni villages organized **"Animal health check-up and treatment camp"** at Hireharkuni on December 22, 2014. Around 135 cows, 48 buffaloes, 9 goats and 4 dogs were treated, vaccines for foot and mouth disease, deworming drugs and mineral mixtures were provided. Dr. Anil Patil, UAS, Dharwad, Dr. Shambu Bennur, District Animal Husbandry and Veterinary Services Department, Dr. H.C. Patil of Veterinary Hospital, Kundagol and Dr. S.M. Hallad, Veterinary Doctor, Milk Federation, Dharwad discussed on aspects of enhancing milk production, animal health protection, artificial insemination, treatment followed by interaction with farmers and question and answering sessions. More than 100 farmers, farm women, members of different institutes participated.







# Seminars and interaction Meet



Seminar was organized on **"Protected cultivation of fruits and vegetables"** from December 5-6, 2014 at KVK, Dharwad. During the seminar Dr. S. M. Mantur and Dr. M. S. Biradar gave information on protected cultivation. Shri Channu Pattanashetti, Pattanashtti Horti-Tech, Dharwad and Shri Mahaveer Navalur of Dummawad, a successful green house colour capsicum grower shared their experiences. Visit to farmers green houses was also organized. A total of 60 farmers and farm women of Dharwad district participated in the seminar.

Seminar on **"Millets - Processing and Value addition"** was organized by Krishi Vigyan Kendra at Surashettikoppa village from December 8-9, 2014. Dr. K. V. Natikar, Associate Director of Extension inaugurated the seminar and addressed the gathering. Topics of millets for food and nutritional security, improved millet varieties and marketing of millet based products were discussed by Dr. Nirmala Yenagi, Dr. Nagappa Harijan and Dr. Uma N. Kulkarni. An exhibition of value added millet based products prepared by different self help groups was organized followed by interaction with farmers. Nearly 75 farmers and farm women participated in the seminar.





Seminar on **"Post harvest technology in chilli"** was organized at Krishi Vigyan Kendra from December 17-18, 2014. Information on pre and post harvest activities for quality chilli production was highlighted. During this seminar, visit to demonstration unit of chilli solar dryer was organized. A total of 89 farmers and farm women participated in the seminar.

**"Interaction meet with farmers and scientists"** was held at somapur village on December 15, 2014. During the interaction session queries on reddening of cotton, cultivation of Bt cotton, wilt disease in bengalgram, weed management in different crops, need of soap powder and lime juice in preparation of pesticide spray, use of composting cultures in crop residue management, enhanced milk production, animal health care and artificial insemination were answered by the scientists. More than 250 farmers and farm women participated in the meet.







# Field Days and Swachh Bharat Abhiyan Programme

## Onion field day



Field day on Arka Kalyan variety of onion and swachh bharat abhiyan programme was organized in field of Shri Vasantareddi Machanahalli of Byalal village, Tq. Navalagund on October 12, 2014. Dr. S. M. Mantur, Programme Co-ordinator of KVK explained the importance of swachh bharat abhiyan followed by administering the cleanliness oath and suggested the farmers to take seed production of Arka Kalyan variety. Dr. S. M. Hiremath, Horticulturist explained the importance of demonstration. While Dr. K. P. Gundannavar, Entomologist discussed on integrated pest management in onion. Fifty nine farmers participated in the field day.

## Groundnut field day



Krishi Vigyan Kendra, Dharwad organized field day on GPBD-5 groundnut variety along with swachh bharat abhiyan programme in field of Shri. Erappa Sankogi of Garag village, Tq. Dharwad on October 13, 2014. Dr. S. M. Mantur, Programme Co-ordinator of KVK administered the cleanliness oath. Dr. S. M. Hiremath, Horticulturist explained the importance of demonstration. While Dr. K. P. Gundannavar, Entomologist discussed on integrated pest management in groundnut. Dr. Uma N. Kulkarni, explained about drudgery reducing groundnut decorticator and desheller. A total of 31 farmers participated in the field day and were benefitted.

## Cotton field day



Similarly field day on integrated pest management in cotton along with swachh bharat abhiyan programme was organized in field of Shri Rudrayya Hiremath, Somapur village, Tq. Dharwad on November 7, 2014. Dr. K. P. Gundannavar, Entomologist discussed on integrated pest management in cotton and explained the importance of demonstration. Dr. S. M. Hiremath, Horticulturist administered the cleanliness oath. Shri Rudrayya Hiremath, Progressive farmer shared his experiences with the other farmers. About 38 farmers participated in the programme.

## State Department of Horticulture sponsored training programmes



Under the project "Vegetable Initiative for Urban Cluster" of Horticulture Department (ZP), Dharwad organized 5 training programmes at Krishi Vigyan Kendra on improved vegetable cultivation for vegetable growers of Dharwad taluk on November 13, 14, 15, 17 and 18, 2014. During the training programmes information on integrated vegetable farming, pest management, organic farming, post harvest technology, importance of bio-technology, soil and water management were provided by agricultural scientists. During these training programmes Smt Kavita A. S., Senior Assistant Director of Horticulture and other Horticulture Officers were present.


**Editor & Publisher** : **Dr. S. M. Mantur**
Programme Co-ordinator, Krishi Vigyan Kendra, Dharwad

**Associate Editors** : **Dr. K. P. Gundannavar**, **Dr. S. M. Hiremath**, **Dr. Uma N. Kulkarni**, **Smt. Shailaja N. Galagali**, **Dr. C. J. Kumar**

**Type Setting and Design** : Shri. Ulavappa Shivoji, DTP Unit, Publicattion Center, UAS, Dharwad

**Typing** : Shri. Santosh B. Kumbar



From
Programme Co-ordinator
Krishi Vigyan Kendra, Saidapur Farm
Dharwad 580 005 (Karnataka)
Telephone : 0836-2444272
E-mail : pc_kvkd@rediffmail.com
Website : www.kvkdharwad.org


To,

Book Post



# ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ಕೃಷಿ ವಿಜ್ಞಾನ ಕೇಂದ್ರ

ಸೈದಾಪುರ ಫಾರ್ಮ, ಧಾರವಾಡ -580 005

ವಾರ್ತಾ ಪತ್ರ

ಸಂಪುಟ : 31, ಅಕ್ಟೋಬರ್–ಡಿಸೆಂಬರ್, 2014, Ph: 0836-2444272 ಮಿಂಚಂಚೆ : pc_kvkd@rediffmail.com ಅಂತರ್ಜಾಲ : www.kvkdharwad.org


## "ಸಂರಕ್ಷಿತ ಕೃಷಿ" ಕುರಿತು ರಾಷ್ಟ್ರ ಮಟ್ಟದ ತರಬೇತಿ ಕಾರ್ಯಕ್ರಮ




ಕೃಷಿ ವಿಜ್ಞಾನ ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ಎಸ್. ಎಂ. ಮಂಟೂರ ಇವರ ನೇತೃತ್ವದಲ್ಲಿ ಹೈ–ಟೆಕ್ ತೋಟಗಾರಿಕೆ ಘಟಕದ ಸಹಯೋಗದೊಂದಿಗೆ ನವ ದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಇವರ ಧನಸಹಾಯದಿಂದ 21 ದಿನಗಳ "ಸಂರಕ್ಷಿತ ಕೃಷಿ" ಕುರಿತು ಚಳಿಗಾಲದ ಶಾಲೆಯನ್ನು (ತರಬೇತಿ) ಡಿಸೆಂಬರ್ 4 ರಿಂದ 24, 2014 ರವರೆಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶನಾಲಯದಲ್ಲಿ ಆಯೋಜಿಸಲಾಗಿತ್ತು. ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿ(ಕೃಷಿ)ಗಳಾದ ಶ್ರೀ ಭರತಲಾಲ ಮೀನಾ ಇವರು ಸದರಿ ಕಾರ್ಯಕ್ರಮವನ್ನು ಡಿಸೆಂಬರ್ 5, 2014 ರಂದು ಉದ್ಘಾಟಿಸಿ ವಿಜ್ಞಾನಿಗಳು ಹಾಗೂ ಶಿಕ್ಷಕರ ಮುಂದೆ ಜ್ಞಾನದ ಹಸಿವು ಒಂದು ಸವಾಲಾಗಿದ್ದು, ಉದ್ಯೋಗ ಸೇರಿದಾಕ್ಷಣ ಈ ಕಲಿಕಾ ಪ್ರಕ್ರಿಯೆ ಕೊನೆಗೊಳ್ಳಬಾರದು, ಏಕೆಂದರೆ ಜ್ಞಾನ ದಾಹಕ್ಕೆ ಯಾವುದೇ ಗಡಿ ಇಲ್ಲ ಮತ್ತು ಕಲಿಕಾ ಪ್ರಕ್ರಿಯೆಯು ಜೀವನದಲ್ಲಿ ನಿರಂತರವಾಗಿರಬೇಕೆಂದು ಪ್ರತಿಪಾದಿಸಿದರು. ಇದೇ ಸಂದರ್ಭದಲ್ಲಿ ಕೃಷಿ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿಗಳಾದ ಡಾ. ಡಿ. ಪಿ. ಬಿರಾದಾರ ಇವರು ಶ್ರೀ ಭರತಲಾಲ ಮೀನಾ ಅವರ ರೈತ ಸಮುದಾಯದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವ ದೃಷ್ಟಿಕೋನ ಹಾಗೂ ಕರ್ನಾಟಕ ಸರ್ಕಾರದ ಕೃಷಿ ಭಾಗ್ಯ ಕಾರ್ಯಕ್ರಮದ ಮೂಲಕ ಕೃಷಿಯನ್ನು ಹೆಚ್ಚು ಲಾಭದಾಯಕವಾಗಿ ನಡೆಸಿದ ಪ್ರಯತ್ನಗಳನ್ನು ಶ್ಲಾಘಿಸಿದರು.

ಡಿಸೆಂಬರ್ 24, 2014 ರಂದು ನಡೆದ ಚಳಿಗಾಲದ ಶಾಲೆಯ ಸಮಾರೋಪ ಸಮಾರಂಭದಲ್ಲಿ ಬಾಗಲಕೋಟೆಯ ತೋಟಗಾರಿಕಾ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿಗಳಾದ ಡಾ. ಡಿ. ಎಲ್. ಮಹೇಶ್ವರ ಇವರು ಚಳಿಗಾಲದ ಶಾಲೆಯ ಉಪನ್ಯಾಸ ಟಿಪ್ಪಣಿಗಳ ಸಂಗ್ರಹವನ್ನು ಬಿಡುಗಡೆಗೊಳಿಸಿ, ಕೃಷಿ ಹಾಗೂ ತೋಟಗಾರಿಕೆಯಲ್ಲಿ ಸೂಕ್ಷ್ಮ ನೀರಾವರಿ ಹಾಗೂ ಸಂರಕ್ಷಿತ ಕೃಷಿ ತಾಂತ್ರಿಕತೆಗಳ ಮಹತ್ವ ಕುರಿತು ಮಾತನಾಡಿದರು. ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿಗಳಾದ ಡಾ. ಡಿ. ಪಿ. ಬಿರಾದಾರ ಇವರು ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ತರಬೇತಿಯಲ್ಲಿ ಪಡೆದ ಜ್ಞಾನವನ್ನು ರೈತ ಸಮುದಾಯಕ್ಕೆ ತಲುಪಿಸುವಂತೆ ಶಿಬಿರಾರ್ಥಿಗಳಿಗೆ ಕರೆ ನೀಡಿದರು. ಪ್ರಾರಂಭದಲ್ಲಿ ವಿಸ್ತರಣಾ ನಿರ್ದೇಶಕರಾದ ಡಾ. ಎಂ. ಬಿ. ಚೆಟ್ಟಿ ಸ್ವಾಗತಿಸಿದರು. ತರಬೇತಿಯ ನಿರ್ದೇಶಕರು ಹಾಗೂ ಕೇಂದ್ರದ ಮುಖ್ಯಸ್ಥರಾದ ಡಾ. ಎಸ್. ಎಂ. ಮಂಟೂರ ತರಬೇತಿಯ ಸಂಕ್ಷಿಪ್ತ ವರದಿ ಮಂಡಿಸಿದರು. ವಿವಿಧ ರಾಜ್ಯಗಳಿಂದ ಒಟ್ಟು 26 ವಿಜ್ಞಾನಿಗಳು ಭಾಗವಹಿಸಿದ್ದರು.






## ಸ್ವಚ್ಛ ಭಾರತ ಅಭಿಯಾನ



ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಗಾಂಧಿ ಜಯಂತಿಯ ಪ್ರಯುಕ್ತವಾಗಿ ಅಕ್ಟೋಬರ್ 2, 2014 ರಂದು ಸ್ವಚ್ಛ ಭಾರತ ಅಭಿಯಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರಾದ ಡಾ. ಎಂ. ಬಿ. ಚೆಟ್ಟಿ, ಕೇಂದ್ರದ ಸಿಬ್ಬಂದಿ ಹಾಗೂ ಕಾರ್ಮಿಕರಿಗೆ ಅಭಿಯಾನದ ಬಗ್ಗೆ ವಿವರಿಸಿ, ಸ್ವಚ್ಛತಾ ಪ್ರತಿಜ್ಞೆ ಬೋಧಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕಾರ್ಯಕ್ರಮ ಸಂಯೋಜಕರಾದ ಡಾ. ಎಸ್. ಎಂ. ಮಂಟೂರ, ವಿಜ್ಞಾನಿಗಳು, ಸಿಬ್ಬಂದಿ ಹಾಗೂ ಕಾರ್ಮಿಕ ವರ್ಗದವರು ಸ್ವಚ್ಛತಾ ಕಾರ್ಯದಲ್ಲಿ ಸಕ್ರೀಯವಾಗಿ ಪಾಲ್ಗೊಂಡರು.

## ಜಂಟಿ ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ ತಂಡದ ಭೇಟಿ



ಬೆಂಗಳೂರಿನ ವಲಯ ನಿರ್ದೇಶಕರ ಕಛೇರಿಯಿಂದ ಶ್ರೀ ರಾಮಮೂರ್ತಿ, ಧಾರವಾಡ ಕೃ.ವಿ.ವಿ. ವಿಸ್ತರಣಾ ನಿರ್ದೇಶಕರಾದ ಡಾ. ಎಂ. ಬಿ. ಚೆಟ್ಟಿ ಹಾಗೂ ಡಾ. ಪಿ. ಎಸ್. ಹೂಗಾರ ಇವರನ್ನೊಳಗೊಂಡ ಕೃಷಿ ವಿಜ್ಞಾನ ಕೇಂದ್ರಗಳ ಜಂಟಿ ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ ತಂಡವು ಕೇಂದ್ರದ ಕಾರ್ಯಚಟುವಟಿಕೆಗಳ ಪ್ರಗತಿ ಪರಿಶೀಲನೆಯನ್ನು ಸೆಪ್ಟೆಂಬರ್ 18, 2014 ಕೈಗೊಂಡಿತು. ಈ ತಂಡದ ಸದಸ್ಯರು ಹತ್ತಿ ಬೆಳೆಯ ಮುಂಚೂಣಿ ಪ್ರಾತ್ಯಕ್ಷಿಕೆಯ ತಾಕುಗಳಿಗೆ ಭೇಟಿ ನೀಡಿ ರೈತರೊಂದಿಗೆ ಚರ್ಚಿಸಿದರು.



## ಸ್ವಚ್ಛತಾ ಅಭಿಯಾನದ ಅಡಿಯಲ್ಲಿ ಕೃಷಿ ತ್ಯಾಜ್ಯ ವಸ್ತುಗಳ ಶೀಘ್ರ ಕಳಸುವಿಕೆ ಪ್ರಾತ್ಯಕ್ಷಿಕೆ



ಕೃಷಿ ವಿಜ್ಞಾನ ಕೇಂದ್ರ, ಧಾರವಾಡ ಹಾಗೂ ಹಿರೇಹರಕುಣಿಯ ಗ್ರಾಮ ಪಂಚಾಯತ, ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘ, ಹಾಲು ಉತ್ಪಾದಕರ ಸಂಘ ಮತ್ತು ಶ್ರೀ. ಮಹಾಲಕ್ಷ್ಮೀ ಅಗ್ರೋ ಕ್ಲಿನಿಕ್ ಇವರುಗಳ ಸಂಯುಕ್ತ ಆಶ್ರಯದಲ್ಲಿ ಗಾಂಧಿ ಜಯಂತಿಯ ಪ್ರಯುಕ್ತವಾಗಿ ನೆಹರು ಯುವ ಕೇಂದ್ರದ ಆವರಣದಲ್ಲಿ **"ಸ್ವಚ್ಛತಾ ಅಭಿಯಾನ ಹಾಗೂ ಕೃಷಿ ತ್ಯಾಜ್ಯ ವಸ್ತುಗಳ ಶೀಘ್ರ ಕಳಿಸುವಿಕೆಗೆ ಅಣುಜೀವಿಗಳ ಬಳಕೆ"** ಪ್ರಾತ್ಯಕ್ಷಿಕೆಯನ್ನು ಅಕ್ಟೋಬರ್ 2, 2014 ರಂದು ಹಮ್ಮಿಕೊಳ್ಳಲಾಗಿತ್ತು. ಕೇಂದ್ರದ ಮುಖ್ಯಸ್ಥರಾದ ಡಾ. ಎಸ್. ಎಂ. ಮಂಟೂರ ಇವರು ಮಹಾತ್ಮಾ ಗಾಂಧಿಜಿಯ ಸ್ವಾತಂತ್ರ್ಯ ಹಾಗೂ ಸ್ವಚ್ಛ ಗ್ರಾಮದ ಪರಿಕಲ್ಪನೆಯ ಬಗ್ಗೆ ವಿವರಿಸಿ ಸ್ವಚ್ಛತಾ ಪ್ರತಿಜ್ಞೆ ಬೋಧಿಸಿದರು. ಕಾರ್ಯಕ್ರಮದ ಅಂಗವಾಗಿ ಶೀರ್ಘ ತ್ಯಾಜ್ಯ ವಸ್ತುಗಳನ್ನು ಕಳಿಸುವಿಕೆಗೆ ಅಣುಜೀವಿಗಳನ್ನು ಬಳಸಿ ಗೊಬ್ಬರ ತಯಾರಿಸುವ ಪ್ರಾತ್ಯಕ್ಷಿಕೆಯನ್ನು ಡಾ. ಎಸ್. ಎಂ. ಹಿರೇಮಠ ಹಾಗೂ ಡಾ. ಕೆ. ಪಿ. ಗುಂಡಣ್ಣವರ ಇವರ ನೇತೃತ್ವದಲ್ಲಿ ಶ್ರೀ ಶಿವಯ್ಯ ಕಳ್ಳಿಮಠ ಇವರ ಹಿತ್ತಲದಲ್ಲಿ ಕೈಗೊಳ್ಳಲಾಯಿತು. ಕಾರ್ಯಕ್ರಮದಲ್ಲಿ 50 ಕ್ಕೂ ಹೆಚ್ಚು ಜನ ಭಾಗವಹಿಸಿ ಪ್ರಾತ್ಯಕ್ಷಿಕೆ ವೀಕ್ಷಿಸಿದರು.



## "ಕೃಷಿಯಲ್ಲಿ ಮಹಿಳೆ ದಿನಾಚರಣೆ"

ಕರಡಿಗುಡ್ಡ ಗ್ರಾಮದಲ್ಲಿ ಡಿಸೆಂಬರ್ 4, 2014 ರಂದು ರೈತ ಮಹಿಳೆಯರಿಗಾಗಿ **"ಕೃಷಿಯಲ್ಲಿ ಮಹಿಳೆ"** ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಕೇಂದ್ರದ ಗೃಹ ವಿಜ್ಞಾನ ತಜ್ಞರಾದ ಡಾ. ಉಮಾ ಎನ್. ಕುಲಕರ್ಣಿಯವರು ಕೃಷಿಯಲ್ಲಿ ಮಹಿಳೆಯ ಪಾತ್ರ ಹಾಗೂ ಕೃಷಿಯಲ್ಲಿ ಮಹಿಳೆ ದಿನಾಚರಣೆಯ ಮಹತ್ವ ಕುರಿತು ರೈತ ಮಹಿಳೆಯರಿಗೆ ಮಾಹಿತಿ ನೀಡಿದರು. ಕೇಂದ್ರದ ತೋಟಗಾರಿಕಾ ತಜ್ಞರಾದ ಡಾ. ಎಸ್. ಎಂ. ಹಿರೇಮಠ ಇವರು ಕೃಷಿ ಆಧಾರಿತ ಚಟುವಟಿಕೆಗಳಾದ ಎರೆಗೊಬ್ಬರ ಉತ್ಪಾದನೆ, ಸಸಿ ತಯಾರಿಕೆ, ತರಕಾರಿ, ಹೂ, ಹಣ್ಣುಗಳ ಬೇಸಾಯ, ಕೈತೋಟ ಕುರಿತಂತೆ ರೈತ ಮಹಿಳೆಯರಿಗೆ ಮಾಹಿತಿ ನೀಡಿದರು. ಕೃಷಿ ಸಮುದಾಯ ಬಾನುಲಿ ಕೇಂದ್ರದ ಕ್ಷೇತ್ರ ಅನುವುಗಾರರಾದ ಶ್ರೀ ಬಸವರಾಜ ಹಿತ್ತಲಮನಿ, ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು. ಕಾರ್ಯಕ್ರಮದಲ್ಲಿ 30 ರೈತ ಮಹಿಳೆಯರು ಭಾಗವಹಿಸಿದ್ದರು.



## ಕೃಷಿ ಮೇಳದಲ್ಲಿ ಭಾಗವಹಿಸುವಿಕೆ



ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯವು ಅಕ್ಟೋಬರ್ 18 ರಿಂದ 20, 2014 ರವರೆಗೆ ಆಯೋಜಿಸಿದ ಕೃಷಿ ಮೇಳದಲ್ಲಿ ಕೃಷಿ ವಿಶ್ವವಿದ್ಯಾಲಯದ ವತಿಯಿಂದ ಡಾ. ಎಸ್. ಎಮ್. ಹಿರೇಮಠ ಭಾಗವಹಿಸಿದ್ದರು. ಇದರಂತೆ ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ನವೆಂಬರ್ 19 ರಿಂದ 21, 2014 ರವರೆಗೆ ಆಯೋಜಿಸಿದ ಕೃಷಿ ಮೇಳದಲ್ಲಿ ಕೃಷಿ ವಿಶ್ವವಿದ್ಯಾಲಯ ವತಿಯಿಂದ ಡಾ. ಎಸ್. ಎಮ್. ಮಂಟೂರ ಹಾಗೂ ಶ್ರೀ ಕುಮಾರ ಸಿ. ಜೆ. ಭಾಗವಹಿಸಿದ್ದರು



## ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಪ್ರಾಯೋಜಿತ ವಿಸ್ತರಣಾ ಚಟುವಟಿಕೆಗಳು



### ತಾರಸಿ ತೋಟಗಾರಿಕೆ ಕಾರ್ಯಾಗಾರ



ಕೃಷಿ ವಿಜ್ಞಾನ ಕೇಂದ್ರ ಹಾಗೂ ವಿಸ್ತರಣಾ ನಿರ್ದೇಶನಾಲಯ ಇವರುಗಳ ಸಹಯೋಗದಲ್ಲಿ ಧಾರವಾಡದ ನಗರವಾಸಿಗಳಿಗೆ **"ತಾರಸಿ ತೋಟಗಾರಿಕೆ"** ಕುರಿತು ತರಬೇತಿ ಹಾಗೂ ಕಾರ್ಯಾಗಾರವನ್ನು ಡಿಸೆಂಬರ್ 26, 2014 ರಂದು ಕೇಂದ್ರದ ಆವರಣದಲ್ಲಿ ಆಯೋಜಿಸಲಾಗಿತ್ತು. ಬೆಂಗಳೂರಿನ ಗಾರ್ಡನ್ ಸಿಟಿ ಫಾರ್ಮರ್ಸ್ ಫೋರಮ್‌ನ ಅಧ್ಯಕ್ಷರು ಹಾಗೂ ಸಾವಯವ ತಾರಸಿ ತೋಟದ ಸಲಹೆಗಾರರಾದ ಡಾ. ಬಿ. ಎನ್. ವಿಶ್ವನಾಥ, ವಿಠಲ ಮಲ್ಯ ವೈಜ್ಞಾನಿಕ ಸಂಶೋಧನಾ ಪ್ರತಿಷ್ಠಾನದ ಯೋಜನಾ ಅಧಿಕಾರಿಯಾದ ಡಾ. ರಾಜೇಂದ್ರ ಹೆಗಡೆ ಹಾಗೂ ಕಾರ್ಯಕ್ರಮ ಸಂಯೋಜಕರಾದ ಡಾ. ಎಸ್. ಎಂ. ಮಂಟೂರ ಇವರುಗಳು ಬದನೆ ಸಸಿಗೆ ನೀರು ಹನಿಸುವುದರ ಮೂಲಕ ಕಾರ್ಯಾಗಾರ ಉದ್ಘಾಟಿಸಿದರು. ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಡಿ. ಪಿ. ಬಿರಾದಾರ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಕಡಿಮೆಯಾಗುತ್ತಿರುವ ಕೃಷಿ ಭೂಮಿ ಹಾಗೂ ಹೆಚ್ಚುತ್ತಿರುವ ನಗರಗಳ ಜನಸಂಖ್ಯೆಗೆ ಅನುಗುಣವಾಗಿ ತಾರಸಿ ತೋಟ ಇಂದಿನ ನಾಗರೀಕತೆಯ ಅವಶ್ಯಕತೆಯಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮಾನ್ಯ ಕುಲಪತಿಗಳು ನಗರವಾಸಿಗಳಿಗೆ ಸಾಂಕೇತಿಕವಾಗಿ ಗುಲಾಬಿ ಗಿಡ ಹಾಗೂ ನಾಟಿ ತಳಿಯ ತರಕಾರಿ ಬೀಜಗಳನ್ನು ವಿತರಿಸಿದರು. ತರಬೇತಿಯಲ್ಲಿ ಪ್ರಾತ್ಯಕ್ಷಿಕೆ ಮೂಲಕ ಸಮಗ್ರ ತಾರಸಿ ತೋಟಗಾರಿಕೆ ಕುರಿತಂತೆ ಮಾಹಿತಿ ನೀಡಲಾಯಿತು ಹಾಗೂ ವಿಜ್ಞಾನಿಗಳೊಂದಿಗೆ ಚರ್ಚೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಎಸ್. ಎಂ. ಮಂಟೂರ ವಹಿಸಿ ಅಭ್ಯರ್ಥಿಗಳಿಗೆ ತರಬೇತಿಯ ಉಪಯುಕ್ತತೆಯನ್ನು ಪಡೆದು ತಮ್ಮ ಮನೆಗಳಲ್ಲಿ ತಾರಸಿ ತೋಟವನ್ನು ಅಳವಡಿಸಿಕೊಳ್ಳುವಂತೆ ಕರೆ ನೀಡಿದರು.

ಕಾರ್ಯಾಗಾರದಲ್ಲಿ ವಿಶ್ವವಿದ್ಯಾಲಯದ ವಿಜ್ಞಾನಿಗಳಾದ ಡಾ. ಎಸ್. ಕೆ. ಗಾಳಿ, ಡಾ. ಎಸ್. ಎಸ್. ಪಾಟೀಲ, ಡಾ. ಎಸ್. ವಿ. ಗಿಡ್ನವರ; ಕೃಷಿ ತಂತ್ರಜ್ಞರ ಸಂಸ್ಥೆಯ ಪದಾಧಿಕಾರಿಗಳು, ಸ್ಕೋಪ್ ಸಂಸ್ಥೆಯ ಡಾ. ಪ್ರಕಾಶ ಭಟ್, ಸಿಂಚನ ನರ್ಸರಿಯ ಶ್ರೀ ವೈ. ಎಚ್. ರ್‍ಯಾಗಿ, ತುಳಸಿ ಅಗ್ರೋ ಸರ್ವಿಸಸ್‌ನ ಶ್ರೀ ವಿಜಯ ಹೆಸರೂರ, ಸರ್ಪನ್ ಕೃಷಿ–ತೋಟಗಾರಿಕೆ ಸಂಶೋಧನಾ ಕೇಂದ್ರದ ಡಾ. ಎನ್. ಬಿ. ಗದುಗಿಮಠ ಹಾಗೂ ಹುಬ್ಬಳ್ಳಿಯ ಯಶಸ್ವಿ ತಾರಸಿ ತೋಟಗಾರರಾದ ಶ್ರೀ ಎಮ್. ಜಿ. ಮಾಯಗಣ್ಣ ಇವರುಗಳು ಭಾಗವಹಿಸಿದ್ದರು. ಸದರಿ ಕಾರ್ಯಾಗಾರದಲ್ಲಿ 125 ಕ್ಕೂ ಹೆಚ್ಚು ನಗರವಾಸಿಗಳು ಭಾಗವಹಿಸಿದ್ದರು.



## ಪಶು ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ

ಹಿರೇಹರಕುಣಿ ಗ್ರಾಮದ ವಿವಿಧ ಸಂಘಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಡಿಸೆಂಬರ್ 22, 2014 ರಂದು "ಪಶು ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ" ವನ್ನು ಹಿರೇಹರಕುಣಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು. ಹಿರೇಹರಕುಣಿ ಹಾಗೂ ಚಿಕ್ಕಹಿರೇಹರಕುಣಿ ಗ್ರಾಮದ 135 ಆಕಳು, 48 ಎಮ್ಮೆ, 9 ಆಡು ಹಾಗೂ 4 ನಾಯಿಗಳಿಗೆ ಚಿಕಿತ್ಸೆ ನೀಡಿ, ಕಾಲುಬಾಯಿ ಬೇನೆ ಲಸಿಕೆ, ಜಂತುನಾಶಕ ಹಾಗೂ ಲವಣ ಮಿಶ್ರಣವನ್ನು ನೀಡಲಾಯಿತು. ಇದಲ್ಲದೇ, ಹೆಚ್ಚಿನ ಹಾಲು ಉತ್ಪಾದನೆ, ದನಗಳ ಆರೋಗ್ಯ ರಕ್ಷಣೆ, ಕೃತಕ ಗರ್ಭಧಾರಣೆ ಹಾಗೂ ಕೆಚ್ಚಲ ಬಾವು ನಿವಾರಣೆ ವಿಷಯಗಳ ಕುರಿತಂತೆ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಡಾ. ಅನಿಲ ಪಾಟೀಲ, ಜಿಲ್ಲೆಯ ಪಶು ಸಂಗೋಪನೆ ಹಾಗೂ ಪಶು ವೈದ್ಯಕೀಯ ಸೇವಾ ಇಲಾಖೆಯ ವೈದ್ಯಾಧಿಕಾರಿಗಳಾದ ಡಾ. ಶಂಭು ಬೆನ್ನೂರ, ಕುಂದಗೋಳ ಪಶು ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಎಚ್. ಸಿ. ಪಾಟೀಲ ಹಾಗೂ ಧಾರವಾಡ ಹಾಲು ಒಕ್ಕೂಟದ ಪಶು ವೈದ್ಯಾಧಿಕಾರಿಗಳಾದ ಡಾ. ಎಸ್. ಎಂ. ಹಳ್ಳದ ರೈತರ ಪ್ರಶ್ನೋತ್ತರಗಳಿಗೆ ಚಿಕಿತ್ಸೆ ನೀಡುವ ಮುಖಾಂತರ ಸೂಕ್ತವಾಗಿ ಸ್ಪಂದಿಸಿದರು. ಸದರಿ ಕಾರ್ಯಕ್ರಮದಲ್ಲಿ 100 ಕ್ಕೂ ಹೆಚ್ಚು ರೈತ, ರೈತ ಮಹಿಳೆಯರು ಮತ್ತು ವಿವಿಧ ಸಂಘ ಸಂಸ್ಥೆಗಳ ಸದಸ್ಯರು ಭಾಗವಹಿಸಿ ತಮ್ಮ ಜಾನುವಾರುಗಳಿಗೆ ಚಿಕಿತ್ಸೆ ಪಡೆಯುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಿದರು







## ವಿಚಾರ ಸಂಕಿರಣ ಹಾಗೂ ಸಂವಾದ ಕಾರ್ಯಕ್ರಮಗಳು



ಧಾರವಾಡ ಜಿಲ್ಲೆಯ ರೈತರಿಗೆ **"ಪುಷ್ಪ ಹಾಗೂ ತರಕಾರಿ ಬೆಳೆಗಳ ಸಂರಕ್ಷಿತ ಕೃಷಿ"** ಕುರಿತು ವಿಚಾರ ಸಂಕಿರಣವನ್ನು ಡಿಸೆಂಬರ್ 5 ರಿಂದ 6, 2014 ರವರೆಗೆ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಸಂರಕ್ಷಿತ ಕೃಷಿ ಬಗ್ಗೆ ಡಾ. ಎಸ್. ಎಂ. ಮಂಟೂರ ಮತ್ತು ಡಾ. ಎಂ. ಎಸ್. ಬಿರಾದಾರ ಮಾಹಿತಿ ನೀಡಿದರು. ಪಟ್ಟಣಶೆಟ್ಟಿ ಹಾರ್ಟಿಟೆಕ್‌ನ ಪುಷ್ಪ ಕೃಷಿ ಉದ್ಯಮಿಯಾದ ಶ್ರೀ ಚನ್ನು ಪಟ್ಟಣಶೆಟ್ಟಿ ಹಾಗೂ ದುಮ್ಮವಾಡ ಗ್ರಾಮದ ಹಸಿರು ಮನೆಯಲ್ಲಿ ಬಣ್ಣದ ಡೊಣ್ಣಮೆಣಸಿನಕಾಯಿಯ ಯಶಸ್ವಿ ಕೃಷಿಕರಾದ ಶ್ರೀ. ಮಹಾವೀರ ರುದ್ರಪ್ಪಾ ನವಲೂರ ಇವರುಗಳು ತಮ್ಮ ಕೃಷಿ ಅನುಭವ ಹಂಚಿಕೊಂಡರು. ಇದೇ ಸಂದರ್ಭದಲ್ಲಿ ವಿವಿಧ ರೈತರ ಹಸಿರು ಮನೆಗಳಿಗೆ ಭೇಟಿ ಆಯೋಜಿಸಲಾಗಿತ್ತು. ವಿಚಾರ ಸಂಕಿರಣದಲ್ಲಿ 60 ರೈತ ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದರು.



**"ಕಿರುಧಾನ್ಯಗಳು – ಮಹತ್ವ, ಸಂಸ್ಕರಣೆ ಹಾಗೂ ಮೌಲ್ಯವರ್ಧನೆ"** ಕುರಿತು ವಿಚಾರ ಸಂಕಿರಣವನ್ನು ಡಿಸೆಂಬರ್ 8 ರಿಂದ 9, 2014 ರವರೆಗೆ ಸೂರಶೆಟ್ಟಿಕೊಪ್ಪ ಗ್ರಾಮದಲ್ಲಿ ಆಯೋಜಿಸಲಾಗಿತ್ತು. ವಿಸ್ತರಣಾ ಸಹ ನಿರ್ದೇಶಕರಾದ ಡಾ. ಕೆ. ವಿ. ನಾಟಿಕರ ಇವರು ವಿಚಾರ ಸಂಕಿರಣವನ್ನು ಉದ್ಘಾಟಿಸಿದರು. ಡಾ. ನಿರ್ಮಲಾ ಯಣಗಿ ಇವರು ಆಹಾರ ಹಾಗೂ ಪೌಷ್ಟಿಕ ಭದ್ರತೆಗಾಗಿ ಕಿರುಧಾನ್ಯಗಳು, ಡಾ. ನಾಗಪ್ಪ ಹರಿಜನ ಇವರು ಕಿರುಧಾನ್ಯಗಳಲ್ಲಿ ತಳಿ ಅಭಿವೃದ್ಧಿ, ಡಾ. ಉಮಾ ಎನ್. ಕುಲಕರ್ಣಿಯವರು ಕಿರುಧಾನ್ಯಗಳ ಮಾರುಕಟ್ಟೆ ವ್ಯವಸ್ಥೆ ಕುರಿತು ಮಾತನಾಡಿದರು. ವಿವಿಧ ಸ್ವಸಹಾಯ ಸಂಘಗಳು ತಯಾರಿಸಿದ ಕಿರುಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳ ವಸ್ತು ಪ್ರದರ್ಶನ ಹಾಗೂ ರೈತರೊಂದಿಗೆ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸದರಿ ವಿಚಾರ ಸಂಕಿರಣದಲ್ಲಿ 75 ರೈತ ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದರು.

ಧಾರವಾಡ ಜಿಲ್ಲೆಯ ಮೆಣಸಿನಕಾಯಿ ಬೆಳೆಗಾರರಿಗೆ **"ಮೆಣಸಿನಕಾಯಿ ಕೊಯ್ಲೋತ್ತರ ತಂತ್ರಜ್ಞಾನಗಳು"** ಕುರಿತು ವಿಚಾರ ಸಂಕಿರಣವನ್ನು ಡಿಸೆಂಬರ್ 17 ರಿಂದ 18, 2014 ರವರೆಗೆ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಗುಣಮಟ್ಟದ ಮೆಣಸಿನಕಾಯಿ ಉತ್ಪಾದನೆಗಾಗಿ ಅನುಸರಿಸಬೇಕಾದ ಕೊಯ್ಲುಪೂರ್ವ ಮತ್ತು ಕೊಯ್ಲೋತ್ತರ ಚಟುವಟಿಕೆಗಳ ಕುರಿತು ಸಮಗ್ರ ಮಾಹಿತಿಯನ್ನು ನೀಡಲಾಯಿತು. ಇದೇ ಸಂದರ್ಭದಲ್ಲಿ ಸೌರ್ಯ ಶಕ್ತಿಯ ಮುಖಾಂತರ ಮೆಣಸಿನಕಾಯಿ ಒಣಗಿಸುವ ಪ್ರಾತ್ಯಕ್ಷಿಕೆ ಘಟಕಕ್ಕೆ ಭೇಟಿ ನೀಡಿ ಮಾಹಿತಿ ನೀಡಲಾಯಿತು. ಸದರಿ ವಿಚಾರ ಸಂಕಿರಣದಲ್ಲಿ 89 ರೈತ ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದರು.



ಸೋಮಾಪುರ ಗ್ರಾಮದಲ್ಲಿ ಡಿಸೆಂಬರ್ 15, 2014 ರಂದು **"ಪ್ರಗತಿಪರ ರೈತರು ಹಾಗೂ ಕೃಷಿ ವಿಜ್ಞಾನಿಗಳೊಂದಿಗೆ ಪರಸ್ಪರ ಸಂವಾದ"** ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಸಂವಾದದಲ್ಲಿ ರೈತರು, ಹತ್ತಿ ಬೆಳೆ ಕೆಂಪಾಗುವಿಕೆ, ಬಿ.ಟಿ. ಹತ್ತಿ ಬೇಸಾಯ, ಕಡಲೆ ಬೆಳೆಯಲ್ಲಿ ಸಿಡಿ ರೋಗ, ವಿವಿಧ ಬೆಳೆಗಳಲ್ಲಿ ಕಳೆ ನಿಯಂತ್ರಣ ಹಾಗೂ ಪೀಡೆನಾಶಕ ಸಿಂಪರಣಾ ದ್ರಾವಣದ ತಯಾರಿಕೆಯಲ್ಲಿ ಸೋಪಿನ ಪುಡಿ ಮತ್ತು ನಿಂಬೆರಸದ ಅವಶ್ಯಕತೆ, ಅಣು ಜೀವಿಗಳಿಂದ ಶೀಘ್ರ ತ್ಯಾಜ್ಯ ಕಳೆಯುವಿಕೆ, ಹೆಚ್ಚಿನ ಹಾಲು ಉತ್ಪಾದನೆ, ದನಗಳ ಆರೋಗ್ಯ ರಕ್ಷಣೆ ಹಾಗೂ ಕೃತಕ ಗರ್ಭಧಾರಣೆ ಕುರಿತಂತೆ ಕೃಷಿ ವಿಜ್ಞಾನಿಗಳೊಂದಿಗೆ ಸಮರ್ಪಕ ಮಾಹಿತಿ ಪಡೆದುಕೊಂಡರು. ಸದರಿ ಕಾರ್ಯಕ್ರಮದಲ್ಲಿ 250 ಕ್ಕೂ ಹೆಚ್ಚು ರೈತ, ರೈತ ಮಹಿಳೆಯರು ಭಾಗವಹಿಸಿದ್ದರು.







# ಕ್ಷೇತ್ರೋತ್ಸವಗಳು ಹಾಗೂ ಸ್ವಚ್ಛ ಭಾರತ ಅಭಿಯಾನ

## ಈರುಳ್ಳಿ ಬೆಳೆ ಕ್ಷೇತ್ರೋತ್ಸವ



ನವಲಗುಂದ ತಾಲೂಕಿನ ಬ್ಯಾಲಾಳ ಗ್ರಾಮದ ಶ್ರೀ ವಸಂತರೆಡ್ಡಿ ಮಾಚನಹಳ್ಳಿ ಇವರ ಹೊಲದಲ್ಲಿ ಅರ್ಕಾ ಕಲ್ಯಾಣ ತಳಿಯ "ಈರುಳ್ಳಿ ಬೆಳೆ ಕ್ಷೇತ್ರೋತ್ಸವ ಹಾಗೂ ಸ್ವಚ್ಛ ಭಾರತ ಅಭಿಯಾನ" ಕಾರ್ಯಕ್ರಮವನ್ನು ಅಕ್ಟೋಬರ್ 12, 2014 ರಂದು ಹಮ್ಮಿಕೊಳ್ಳಲಾಗಿತ್ತು. ಕೇಂದ್ರದ ಮುಖ್ಯಸ್ಥರಾದ ಡಾ. ಎಸ್. ಎಂ. ಮಂಟೂರ ಇವರು ಸ್ವಚ್ಛ ಭಾರತ ಅಭಿಯಾನದ ಬಗ್ಗೆ ವಿವರಿಸುತ್ತಾ ಸ್ವಚ್ಛತಾ ಪ್ರತಿಜ್ಞೆ ಬೋಧಿಸಿ, ಅರ್ಕಾ ಕಲ್ಯಾಣ ತಳಿಯ ಬೀಜೋತ್ಪಾದನೆ ಕೈಗೊಂಡು ಸ್ವಾವಲಂಬಿಗಳಾಗಲು ಕರೆ ನೀಡಿದರು. ಪ್ರಾತ್ಯಕ್ಷಿಕೆ ಮಹತ್ವವನ್ನು ತೋಟಗಾರಿಕೆ ತಜ್ಞರಾದ ಡಾ. ಎಸ್. ಎಂ. ಹಿರೇಮಠ ವಿವರಿಸಿದರು. ಕೀಟ ತಜ್ಞರಾದ ಡಾ. ಕೆ. ಪಿ. ಗುಂಡಣ್ಣವರ ಈರುಳ್ಳಿ ಬೆಳೆಯ ಸಮಗ್ರ ಪೀಡೆ ನಿರ್ವಹಣೆ ಬಗ್ಗೆ ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಸುಮಾರು 59 ರೈತರು ಭಾಗವಹಿಸಿದ್ದರು.

## ಶೇಂಗಾ ಬೆಳೆ ಕ್ಷೇತ್ರೋತ್ಸವ



ಧಾರವಾಡ ತಾಲೂಕಿನ ಗರಗ ಗ್ರಾಮದ ಶ್ರೀ. ಈರಪ್ಪ ಸಂಕೋಜಿ ಇವರ ಹೊಲದಲ್ಲಿ ಜಿಪಿಬಿಡಿ–5 ತಳಿಯ "ಶೇಂಗಾ ಬೆಳೆ ಕ್ಷೇತ್ರೋತ್ಸವ ಹಾಗೂ ಸ್ವಚ್ಛ ಭಾರತ ಅಭಿಯಾನ" ಕಾರ್ಯಕ್ರಮವನ್ನು ಅಕ್ಟೋಬರ್ 13, 2014 ರಂದು ಹಮ್ಮಿಕೊಳ್ಳಲಾಗಿತ್ತು. ಕೇಂದ್ರದ ಮುಖ್ಯಸ್ಥರಾದ ಡಾ. ಎಸ್. ಎಂ. ಮಂಟೂರ ಇವರು ಸ್ವಚ್ಛತಾ ಪ್ರತಿಜ್ಞೆ ಬೋಧಿಸಿದರು. ಪ್ರಾತ್ಯಕ್ಷಿಕೆ ಮಹತ್ವವನ್ನು ಕೇಂದ್ರದ ತೋಟಗಾರಿಕೆ ತಜ್ಞರಾದ ಡಾ. ಎಸ್. ಎಂ. ಹಿರೇಮಠ ವಿವರಿಸಿದರು. ರೈತರೊಂದಿಗೆ ಚರ್ಚಾ ಸಂವಾದದಲ್ಲಿ ಮಾತನಾಡಿದ ಕೇಂದ್ರದ ಕೀಟ ತಜ್ಞರಾದ ಡಾ. ಕೆ. ಪಿ. ಗುಂಡಣ್ಣವರ ಶೇಂಗಾ ಬೆಳೆಯ ಸಮಗ್ರ ಪೀಡೆ ನಿರ್ವಹಣೆ ಬಗ್ಗೆ ವಿವರಿಸಿದರು ಹಾಗೂ ಗೃಹ ವಿಜ್ಞಾನ ತಜ್ಞರಾದ ಡಾ. ಉಮಾ ಎನ್. ಕುಲಕರ್ಣಿ ರೈತ ಮಹಿಳೆಯರಿಗೆ ಕಡಿಮೆ ಶ್ರಮದಿಂದ ಶೇಂಗಾ ಕಾಯಿ ಬಿಡಿಸುವ ಯಂತ್ರದ ಬಗ್ಗೆ ಮಾಹಿತಿ ನೀಡಿ, ಸ್ವಚ್ಛ ಭಾರತ ಅಭಿಯಾನದ ಪ್ರತಿಜ್ಞಾ ವಿಧಿ ಬೋಧಿಸಿದರು. ಈ ಕಾರ್ಯಕ್ರಮದಲ್ಲಿ ಸುಮಾರು 31 ರೈತರು ಭಾಗವಹಿಸಿ ಕ್ಷೇತ್ರೋತ್ಸವದ ಪ್ರಯೋಜನ ಪಡೆದರು

## ಹತ್ತಿ ಬೆಳೆ ಕ್ಷೇತ್ರೋತ್ಸವ



ಧಾರವಾಡ ತಾಲೂಕಿನ ಸೋಮಾಪುರ ಗ್ರಾಮದ ಶ್ರೀ. ರುದ್ರಯ್ಯ ಹಿರೇಮಠ ಇವರ ಹೊಲದಲ್ಲಿ "ಹತ್ತಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಕ್ಷೇತ್ರೋತ್ಸವ ಹಾಗೂ ಸ್ವಚ್ಛ ಭಾರತ ಅಭಿಯಾನ" ಕಾರ್ಯಕ್ರಮವನ್ನು ನವೆಂಬರ್ 7, 2014 ರಂದು ಹಮ್ಮಿಕೊಳ್ಳಲಾಗಿತ್ತು. ಕೀಟ ತಜ್ಞರಾದ ಡಾ. ಕೆ.ಪಿ. ಗುಂಡಣ್ಣವರ ಹತ್ತಿ ಬೆಳೆಯ ಸಮಗ್ರ ಪೀಡೆ ನಿರ್ವಹಣೆ ಹಾಗೂ ಕ್ಷೇತ್ರೋತ್ಸವದ ಮಹತ್ವ ಕುರಿತು ವಿವರಿಸಿದರು. ಡಾ. ಎಸ್. ಎಂ. ಹಿರೇಮಠ ಇವರು ಸ್ವಚ್ಛ ಭಾರತ ಅಭಿಯಾನದಡಿ ಸ್ವಚ್ಛತಾ ಪ್ರತಿಜ್ಞೆ ಬೋಧಿಸಿದರು. ಇದೇ ಸಂದರ್ಭದಲ್ಲಿ ಪ್ರಗತಿಪರ ಹತ್ತಿ ಬೆಳೆಯ ರೈತರಾದ ಶ್ರೀ ರುದ್ರಯ್ಯ ಹಿರೇಮಠ ಅವರು ತಮ್ಮ ಅನುಭವ ಹಂಚಿಕೊಂಡರು. ಈ ಕಾರ್ಯಕ್ರಮದಲ್ಲಿ ಸುಮಾರು 38 ರೈತರು ಭಾಗವಹಿಸಿದ್ದರು.

## ತೋಟಗಾರಿಕೆ ಇಲಾಖೆ ಪ್ರಾಯೋಜಿತ ತರಬೇತಿಗಳು



ತೋಟಗಾರಿಕೆ ಇಲಾಖೆ (ಜಿ.ಪಂ) ವತಿಯಿಂದ ವೆಜಿಟೇಬಲ್ ಇನಿಷಿಯೇಟಿವ್ ಫಾರ್ ಅರ್ಬನ ಕ್ಲಸ್ಟರ ಯೋಜನೆಯಡಿ ಧಾರವಾಡ ತಾಲೂಕಿನ ತರಕಾರಿ ಬೆಳೆಗಾರರಿಗೆ "ಸುಧಾರಿತ ತರಕಾರಿ ಕೃಷಿ" ಕುರಿತು ಒಂದು ದಿನದ ಐದು ತರಬೇತಿಗಳನ್ನು (ನವೆಂಬರ್ ತಿಂಗಳಿನ ದಿ: 13, 14, 15, 17 ಮತ್ತು 18, 2014) ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಸಮಗ್ರ ತರಕಾರಿ ಕೃಷಿ, ಪೀಡೆ ನಿರ್ವಹಣೆ, ಸಾವಯವ ಕೃಷಿ, ಕೊಯ್ಲೋತ್ತರ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮಹತ್ವ, ಮಣ್ಣು ಮತ್ತು ನೀರು ಸಂರಕ್ಷಣೆ ಕುರಿತು ಕೃಷಿ ವಿಜ್ಞಾನಿಗಳು ಮಾಹಿತಿ ನೀಡಿದರು. ಸದರಿ ತರಬೇತಿಗಳಲ್ಲಿ ಧಾರವಾಡ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕಿಯಾದ ಶ್ರೀಮತಿ ಕವಿತಾ. ಎ. ಎಸ್. ಹಾಗೂ ತೋಟಗಾರಿಕಾ ಅಧಿಕಾರಿಗಳು ಭಾಗವಹಿಸಿದ್ದರು.


ಸಂಪಾದಕರು ಹಾಗೂ ಪ್ರಕಾಶಕರು : ಡಾ. ಎಸ್. ಎಮ್. ಮಂಟೂರ
ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರ, ಧಾರವಾಡ

ಸಹ ಸಂಪಾದಕರು : ಡಾ. ಎಸ್. ಎಮ್. ಹಿರೇಮಠ, ಡಾ. ಉಮಾ ಎನ್. ಕುಲಕರ್ಣಿ, ಡಾ. ಕೆ. ಪಿ. ಗುಂಡಣ್ಣವರ, ಶ್ರೀಮತಿ ಶೈಲಜಾ ಎನ್. ಗಲಗಲಿ, ಡಾ. ಸಿ. ಜೆ. ಕುಮಾರ

ಅಕ್ಷರ ಜೋಡಣೆ ಮತ್ತು ವಿನ್ಯಾಸ : ಶ್ರೀ ಉಳವಪ್ಪ ಶಿವೋಜಿ
ಡಿಟಿಪಿ, ಘಟಕ ಪ್ರಕಟಣಾ ಕೇಂದ್ರ, ಕೃವಿವಿ, ಧಾರವಾಡ

ಬೆರಳಚ್ಚುಗಾರರು : ಶ್ರೀ. ಸಂತೋಷ ಬಿ. ಕುಂಬಾರ



ಇಂದ,

ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ಸೈದಾಪುರ ಫಾರ್ಮ
ಧಾರವಾಡ 580 005 (ಕರ್ನಾಟಕ)
ದೂರವಾಣಿ : 0836–2444272
ಮಿಂಚಂಚೆ : pc_kvkd@rediffmail.com
ವೆಬ್‌ಸೈಟ್ : www.kvkdharwad.org


ಗೆ,

ತೆರೆದ ಅಂಚೆ

